ಶಿರಾ ತಾಲ್ಲೂಕಿನ ಬರಗೂರು ಪಕ್ಕದ ಕದಿರೇಹಳ್ಳಿಯವರಾದ ಸೋಮಶೇಖರ್, ಕವಿತೆಗಳ ಮೂಲಕ ಕನ್ನಡ ಬರಹ ಲೋಕವನ್ನು ಪ್ರವೇಶಿಸಿದರು. ನಂತರ ಕಥೆಗಳ ಬರವಣಿಗೆ ಪ್ರಿಯವೆನಿಸಿತು. ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿ, ಸ್ನಾತಕೋತ್ತರ ಪದವಿ ಓದಿ, ಕಳೆದ 16 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಹುಳಿಯಾರಿನ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಮೇಲೆ ಎಂಎಲ್‌ಎ ಅವರಿಗೆ ಹೇಳಿ ಏನಾದ್ರ ಸಹಾಯ ಮಾಡಿಸೋಣ ಎಂದಿದ್ದಕ್ಕೆ, ಹನುಮಪ್ಪ 'ಸ್ವಾಮಿ ಆ ನಂಜಪ್ಪನ ಮೇಲೆ ಕಂಪ್ಲೇಂಟ್ ಬ್ಯಾಡ್ವ ?' ಎಂದಿದ್ದಕ್ಕೆ ನಿಂಗೇಗೌಡ್ರು 'ಅಲ್ಲಪ್ಪ ಬಡವರೆಲ್ಲ ಕಂಪ್ಲೇಂಟ್, ಕೇಸು, ಲಾಯರ್, ಕೋರ್ಟ್ ಅಂತ ಅಲಕ್ಕಂಡಿರ್ತೀರಾ? ಬ್ಯಾಡ ಕಣ್ರಪ್ಪ ಆ ಸಹವಾಸಕ್ಕೆ ಹೋಗಬ್ಯಾಡ್ರಿ, ದುಷ್ಟರ ಕಂಡರೆ ದೂರು ಇರು ಅನ್ನೋ ಗಾದೆನೇ ಇದೆ , ನೀವು ಹಂಗಿದ್ಕಂಡು ಬಾಳು ಬದುಕು ನೋಡ್ಕಳ್ರಿ ಅನ್ನುತ್ತಲೇ ಒಂದ್ಕೆಲ್ಸ ಮಾಡು ನಾಡ ಕಚೇರಿಲಿ ಬಸವರಾಜಪ್ಪ ಅಂತ ಇದ್ದಾರೆ. ಆವರಿಗೆ ನಿನ್ನ ಬಗ್ಗೆ ಹೇಳಿ ಸಹಾಯ ಮಾಡಿ ಅಂತನೂ ಹೇಳಿರುತ್ತೇನೆ, ಅವರು ಹೇಳಿದಂಗೆ ಮಾಡ್ರಿ' ಅಂತ ಬುದ್ಧಿವಾದ ಹೇಳಿ, ಅಂದು ಪೋಲೀಸ್ ಕೇಸ್ ಮಾಡುವ ಆತನ ಬಯಕೆಗೆ ಅರಿವಿನ ತಣ್ಣೀರೆರಚಿ ಹನುಮಪ್ಪನ್ನ ಊರಿಗೆ ಕಳುಸ್ತಾರೆ, ನಿಂಗೇಗೌಡ್ರು. ಈತನು ಕೂಡ ತಲೆ ಅಳ್ಳಾಡಿಸಿ ನಂಜಪ್ಪನ ಮೇಲಿನ ಕೋಪನ ನುಂಕ್ಕೊಂಡು ಮನೆಗೆ ಬರ್ತಾನೆ. ಅಂದು ರಾತ್ರಿ ಗಂಡ ಹೆಂಡತಿ ಮಲಕ್ಕೊಂಡಿದ್ದಾಗ ಹನುಮಪ್ಪ ಹೆಂಡ್ತಿ ಸಾಕಮ್ಮನಿಗೆ ಕೀಚಕ ನಂಜಪ್ಪನ ವಿಚಾರದಲ್ಲಿ ಎಚ್ಚರಿಕೆಯಿಂದ ಇರು, ಇನ್ನುಮುಂದೆ ಅವನ ತೋಟದ ಕೆಲಸಕ್ಕೆ ಹೋಗಬೇಡ ಅಂತೆಲ್ಲ ಮಾತುಕತೆಯಾಡಿ ಆಕೆ ಕೂಡ ಸಮ್ಮತಿಸಿ ಇಬ್ಬರೂ ನಿದ್ದೆಗೆ ಜಾರುತ್ತಿರುವಾಗ ಹನುಮಪ್ಪನಿಗೆ ಹೊಲಕ್ಕೆ ಬೋರನ್ನಾಕಿಸಿ ತೋಟಕಟ್ಟುವ ಆಸೆ ಚಿಗುರೊಡೆಯುತ್ತಿರುತ್ತದೆ.

ಹೊತ್ತಾರೆಯೇ ಎದ್ದ ಹನುಮಪ್ಪ ಹಿತ್ಲಕಡೆ ಹೋಗಿ ಬಂದಾಗ ಸಾಕಮ್ಮ ಒಲೆ ಮುಂದೆ ಕೂತು ಕಾಫಿ ಕಾಯಿಸಲಿಕ್ಕೆ ಪರಿಕರಗಳನ್ನು ಹೊಂಚಿಕೊಳ್ಳುತ್ತಿದ್ದಳು ಹಿರೀಮಗ ಎದ್ದುಕೂಡಲೆ ಎರಡು ಸೋಟೆಯಲ್ಲಿ ಜೊಲ್ಲು ಸುರಿಸಿಕೊಂಡವನು ಕಣ್ಣ ಉಜ್ಜಿಕೊಂಡು ಸೀದ ಒಲೆಮುಂದಕ್ಕೆ ಬಂದಾಗ ಸಾಕಮ್ಮ 'ಪಾಪ ಆ ಲೋಟ ತಕ್ಕೊಂಡು ಲಕ್ಕಜ್ಜರ ಮನೆತವ ಹಾಲೊಯಿಸ್ಕಂಡು ಬರೊಗಪ್ಪ' ಅಂದೊಡನೆ ಶಿವರಾಜ ಮರುಮಾತಾಡದೆ ಲೊಟ ಹಿಡಕೊಂಡು ಬಾಯಲ್ಲಿ ಬೂ....ರ್ ಎಂದು ಬಸ್ಸ್ ಬಿಡ್ಕೊಂಡು ಮನೆ ಮುಂದಿನ ರಸ್ತೆಗೆ ಇಳಿಸಿ ಓಡತೊಡಗಿದ. ಇತ್ತ ಹನಮಪ್ಪ ಮನೆ ಒಳಕೋಗಿ ಪೋಟೊ ಹಿಂದಿನ ಬೀಗದ ಕೈ ತಕ್ಕಂಡ್ ಪೆಟ್ಟಿಗೆ ಬೀಗ ತೆಗೆದು ತನ್ನ ತಾತ ಕಾಳಜ್ಜ ಹೆಸರಲ್ಲಿರುವ ಭೂ ದಾಖಲೆಗಳನ್ನು ತಕ್ಕೊಂಡು ಒಂದು ಕೈಚೀಲದಲ್ಲಿ ಇಟ್ಕೊಂಡು ಕೈಕಾಲ ಮುಖ ತೊಳ್ಕಂಡು ನೆನ್ನೆನೆ ಇಟ್ಕಂಡಿದ್ದ ಬಟ್ಟೆಗಳನ್ನು ಗೂಟದಿಂದ ತಕ್ಕೊಂಡು ಮೈಗಾಕ್ಕೊಂಡು ಸೀದ ಒಲೆ ಮುಂದುಕ್ಕೆ ಬಂದ ಆಗಲೇ ಹೆಂಡ್ತಿ, ಮಗ ಕಾಫಿ ಕುಡಿತಾ ಇದ್ರು, ಗಂಡನ್ನೋಡಿದ ಈಕೆ ಮತ್ತೊಂದು ಲೋಟಕ್ಕೆ ಕಾಫಿ ಹೊಯ್ದು ಕೊಟ್ಲು, ಕಾಫಿ ಇಸ್ಕಂಡ ಹನುಮಪ್ಪ 'ಮಾಳಮ್ಮ ಎಲ್ಲಿ' ಅಂದ. 'ಮೊನ್ನೆದು ಕೂಲಿ ದುಡ್ಡು ಇಸ್ಕಂಡ್ ಬರಕೆ ಹನುಮಕ್ಕರ ಮನೆತಾವ ಕಳ್ಸಿದ್ದೀನಿ' ಅಂದ ಹೆಂಡ್ತಿಗೆ 'ಒಸಿ ಚಂದ್ರಾಪುರದಲ್ಲಿ ಕೆಲಸೈತೆ ಹೋಗ್ಬತ್ತಿನಿ ಎಷ್ಟೊತ್ತಾಯ್ತದೋ ಗೊತ್ತಿಲ್ಲ, ಮಕ್ಕಳ್ನ ಸ್ಕೂಲ್ಗೆ ಕಳಿಸಿ ಮನೆತಾವೆ ಇದ್ದು ದನಿಗೆ ನೀರು ನಿಡಿ ನೋಡ್ಕಂಡು ಇರು ಕೆಲಸಕ್ಕೇನು ಹೋಗಬ್ಯಾಡ' ಎಂದೇಳಿ ಕೈಯಾಗ ಬ್ಯಾಗ್ ಹಿಡಕಂಡ ಬಸ್‌ಸ್ಟಾಂಡ್ ಕಡಿಗೆ ಹೊರಟ.

ಇತ್ತ ಚಂದ್ರಾಪುರದ ನಾಡ ಕಚೇರಿ ಮುಂದೆ ಜನ ಅಲ್ಲಲ್ಲೆ ಗುಂಪು ಗುಂಪಾಗಿ ಕೂತು ಮಾತುಕತೆಯಲ್ಲಿ ಮುಳುಗಿದ್ರು. ಬಸ್‌ಸ್ಟಾಂಡ್‌ಯಿಂದ ನಡೆದೆ ಬಂದಿದ್ದ ಹನುಮಪ್ಪ ಕಚೇರಿ ಮುಂದಿದ್ದ ಹುಣಸೇ ಮರದಡಿಯ ಜಗತಿಕಲ್ಲಿನ ಮೇಲೆ ಕೂತ್ಕಂಡ, ರವಷ್ಟು ದೂರದಲ್ಲಿ ಒಂದೇ ನೇರಕ್ಕೆ ಚಪ್ಪಲಿಗಳನ್ನು ಒಂದರ ಜೊತೆ ಹಿಂದೆ ಒಂದು ಜೊತೆ ಬಿಟ್ಟಿದ್ದು, ಕೈ ಚೀಲ ಇಟ್ಟು ಮೇಲೆ ಕಲ್ಲಿಟ್ಟದ್ದು, ಗೋಣಿಚೀಲ ಇಟ್ಟಿದ್ದು ಈತನಿಗೆ ಆಶ್ಚರ್ಯವಾಗಿ ಕಾಣ್ತು, ಸ್ವಲ್ಪ ಹೊತ್ತಾದ್ಮೇಲೆ ಯಾರೋ ಬಂದು ಕಚೇರಿ ಬೀಗ ತಗ್ದಿದ್ದೆ ತಡ, ಚಪ್ಪಲಿ ಬಿಟ್ಟಿದ್ದ ಜನಗಳೆಲ್ಲ ಸಾಲಗಟ್ಟಿ ನಿಂತರು. ಕೈಚೀಲದವರು, ಗೋಣಿಚೀಲದವರು ಸಾಲಿಗೆ ಸೇರಿಕೊಂಡಿದ್ದನ್ನ